## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್.ಸಿ. 110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ದಿನೇಶ್ ಗೌಡ | *ಪ್ರಮಾಣ ಮಾಡಿಸಿದ ದಿನಾಂಕಃ* | |
| ತಂದೆ/ಗಂಡನ ಹೆಸರು | ಃ ಶ್ರೀ ಜವರಾಯ ಗೌಡ | **12.12.2022** | |
| ವಯಸ್ಸು | ಃ 47 ವರ್ಷ | | |
| ವೃತ್ತಿ | ಃ ಗುತ್ತಿಗೆ ಕೆಲಸ | ಪ್ರಾ.ಸಾ. | ಃ 24 |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ 43 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನ್ಯಾಯಾಲಯದಲ್ಲಿ ಹಾಜರು ಇರುವ *8* ನೇ ಆರೋಪಿಯನ್ನು ನೋಡಿಲ್ಲ. ನಿ.ಪಿ-*99* ರಲ್ಲಿ ನಿ.ಪಿ-*99(ಎ)* ನನ್ನ ಸಹಿ ಇದೆ. ನ್ಯಾಯಾಂಗ ಬಂಧನದಲ್ಲಿರುವ *9* ನೇ ಆರೋಪಿ ಸೂರಜ್ ಪರಿಚಯ ಇಲ್ಲ. ನಿ.ಪಿ-*100* ರಲ್ಲಿ ನಿ.ಪಿ-*100(ಎ)* ನನ್ನ ಸಹಿ ಇದೆ. ಒಂಟಿಕೊಪ್ಪಲಿನಲ್ಲಿರುವ ಪೊ.ಠಾಣೆಯಲ್ಲಿ ಸದರಿ ಸಹಿಗಳನ್ನು ಮಾಡಿದ್ದೇನೆ. ನಾನು ಬೇರೆ ಕಾರಣವಾಗಿ ಪೊ.ಠಾಣೆಗೆ ಹೋದಾಗ ಸಹಿಗಳನ್ನು ಪಡೆದಿದ್ದಾರೆ. ಕಾರಣ ಗೊತ್ತಿಲ್ಲ. *8* ಮತ್ತು *9* ನೇ ಆರೋಪಿಗಳು ತೋರಿಸಿದಂತೆ ನನ್ನ ಸಮಕ್ಷಮ ಸ್ಥಳ ಮತ್ತು ಅಮಾನತ್ತು ಮಹಜರ್ ಗಳನ್ನು ಮಾಡಿಲ್ಲ. ನನ್ನ ಸಮಕ್ಷಮ ಒಂದು ಮೊಬೈಲ್ ಅನ್ನು ವಶಕ್ಕೆ ಪಡೆದಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

*2.* (ಸೀಲು ಮಾಡಿದ ಪ್ಯಾಕೆಟ್ ಗಳನ್ನು ನ್ಯಾಯಾಲಯದ ಅನುಮತಿ ಮೇರೆಗೆ ತೆಗೆಯಲಾಯಿತು) ನನಗೆ ಈಗ ತೋರಿಸಿದ ಫೋಟೊವನ್ನು ನಿ.ಪಿ *-101* ರಂತೆ ಗುರುತಿಸಲಾಯಿತು ಸದರಿ ಫೊಟೋದಲ್ಲಿ ನಾನು ಮತ್ತು *8* ನೇ ಆರೋಪಿ ಕಂಡುಬರುತ್ತೇವೆ. *8* ನೇ ಆರೋಪಿ ಮೊಬೈಲ್ ಅನ್ನು ಹಾಜರು ಮಾಡುವ ಬಗ್ಗೆ ಕಂಡುಬರುತ್ತದೆ ಎಂದರೆ ಸರಿ. ಕೊಲೆ ಪ್ರಕರಣಕ್ಕೆ ಸಂಬಂದಪಟ್ಟ *8* ನೇ ಆರೋಪಿ ಪೊ.ಠಾಣೆಯಲ್ಲಿ ದಿಃ *30.12.2016* ರಂದು ಮೊಬೈಲ್ ಅನ್ನು ನನ್ನ ಸಮಕ್ಷಮ ಹಾಜರು ಮಾಡಿದ ಮೇರೆಗೆ ನಿ.ಪಿ*-101* ರಂತೆ ಫೊಟೋವನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ. ಕೊಲೆ ಪ್ರಕರಣದಲ್ಲಿ ದಸ್ತಗಿರಿ ಆಗಿದ್ದ *8* ಮತ್ತು *8* ನೇ ಆರೋಪಿಗಳು ಕೊಲೆ ಮಾಡಲು ಸಂಚು ರೂಪಿಸಿದ್ದ ಸ್ಥಳವನ್ನು ತೋರಿಸುವುದಾಗಿ ಪೊ.ಠಾಣೆಯಲ್ಲಿ ನನ್ನ ಸಮಕ್ಷಮ ಮಾಹಿತಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ಫೋಟೊಗಳನ್ನು ನಿ.ಪಿ *-102* ಮತ್ತು *103* ರಂತೆ ಗುರುತಿಸಲಾಯಿತು ಸದರಿ ಫೊಟೋಗಳಲ್ಲಿ ನಾನು, *8* ಮತ್ತು *9* ನೇ ಆರೋಪಿ ಕಂಡುಬರುತ್ತೇವೆ ಎಂದರೆ ಸರಿ.

*3.* *8* ಮತ್ತು *9* ನೇ ಆರೋಪಿಗಳು ಸಂಚು ರೂಪಿಸಿದ ಸ್ಥಳವನ್ನು ತೋರಿಸುವುದಾಗಿ ನೀಡಿದ ಹೇಳಿಕೆ ಮೇರೆಗೆ ದಿಃ *30.12.2016* ರಂದು ಸಂಜೆ *4.00* ರ ವೇಳೆಗೆ ಕೇರ್ಗಳ್ಳಿ ತೋಟದ ಮನೆಯ ಹತ್ತಿರ ನನಗೆ ತೋರಿಸಿದಂತೆ ನಿ.ಪಿ*-102* ಮತ್ತು *103* ರಂತೆ ಫೋಟೋಗಳನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ ಮತ್ತು ಗೊತ್ತಿಲ್ಲ. ಸದರಿ ಮನೆಯಲ್ಲಿ ನಿ.ಪಿ*-100* ರಂತೆ ಮಾಡಿದ ಮಹಜರ್ ನ ಅಂಶಗಳನ್ನು ತಿಳಿದು ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು *8* ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಗುತ್ತಿಗೆ

ಕೆಲಸ ಮಾಡುತ್ತೇನೆ ಮತ್ತು ದಾಖಲೆಗಳ ಬಗ್ಗೆ ಮಾಹಿತಿ ಪಡೆಯುತ್ತೇನೆ ಎಂದರೆ ಸರಿ. ನನಗೆ ಈಗ ತೋರಿಸಿದ ಸೀಲ್ ಪ್ಯಾಕೆಟ್ ಮೇಲೆ ನನ್ನ ಸಹಿ ಇದೆ. (ಸೀಲು ಮಾಡಿದ ಪ್ಯಾಕೆಟ್ ಗಳನ್ನು ನ್ಯಾಯಾಲಯದ ಅನುಮತಿ ಮೇರೆಗೆ ತೆಗೆಯಲಾಯಿತು) 8 ನೇ ಆರೋಪಿ ನನಗೆ ಈಗ ತೋರಿಸಿದ ಮತ್ತು ನಿ.ಪಿ-101 ಪೋಟೋದಲ್ಲಿ ಕಂಡು ಬರುವಂತೆ ಮೊಬೈಲ್ ಅನ್ನು ನನ್ನ ಸಮಕ್ಷಮ ಹಾಜರು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ-99 ಮತ್ತು 100 ರ ವಿಷಯಗಳನ್ನು ತಿಳಿದು ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಿ.ಪಿ-104 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾ.ಸಾ-44 ಅವರು ಸಹ ನನ್ನ ಜೊತೆಯಲ್ಲಿ ಇದ್ದು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ99 ಮತ್ತು 100 ರ ಅಂಶಗಳ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 8 ಮತ್ತು 9 ಆರೋಪಿ ಪರ ವಕೀಲರಾದ ಶ್ರೀ ಯು.ಎಸ್ ರವರಿಂದಃ-</u>

. 8 ನೇ ಆರೋಪಿಯನ್ನು ಇಂದು ಪ್ರಥಮವಾಗಿ ನ್ಯಾಯಾಲಯದಲ್ಲಿ ನೋಡಿದ್ದೇನೆ ಎಂದರೆ ಸರಿ.

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು